**ರಾಷ್ಟ್ರೀಯ ದಿನಾಚರಣೆಯಲ್ಲಿ ಮಾರಿಷಸ್‌ನ ಅತ್ಯುನ್ನತ ನಾಗರಿಕ ಪ್ರಶಸ್ತಿ ಸ್ವೀಕರಿಸಿದ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ (ಮಾರ್ಚ್ 12, 2025)**

ಮಾರ್ಚ್ 12, 2025

ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಮಾರಿಷಸ್ ಗಣರಾಜ್ಯದ 57 ನೇ ರಾಷ್ಟ್ರೀಯ ದಿನಾಚರಣೆ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

2. ಸಮಾರಂಭದ ವೇಳೆ, ಮಾರಿಷಸ್ ಗಣರಾಜ್ಯದ ಅಧ್ಯಕ್ಷರಾದ ಗೌರವಾನ್ವಿತ ಶ್ರೀ ಧರ್ಮಬೀರ್ ಗೋಖೂಲ್ ಅವರು ಪ್ರಧಾನಮಂತ್ರಿ ಮೋದಿ ಅವರಿಗೆ ಮಾರಿಷಸ್‌ನ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಗ್ರ್ಯಾಂಡ್ ಕಮಾಂಡರ್ ಆಫ್ ದಿ ಆರ್ಡರ್ ಆಫ್ ದಿ ಸ್ಟಾರ್ ಆಂಡ್ ಕೀ ಆಫ್ ದಿ ಇಂಡಿಯನ್ ಓಷನ್ (G.C.S.K) ಪ್ರಶಸ್ತಿಯನ್ನು ಪ್ರದಾನ ಮಾಡಿದರು. ಇದೇ ಮೊದಲ ಬಾರಿಗೆ ಭಾರತೀಯ ನಾಯಕರೊಬ್ಬರು ಈ ಗೌರವಕ್ಕೆ ಪಾತ್ರರಾಗಿದ್ದಾರೆ.

3. ಪ್ರಧಾನಿ ಮೋದಿ ಅವರು ಈ ಪ್ರಶಸ್ತಿಯನ್ನು ಭಾರತ ಮತ್ತು ಮಾರಿಷಸ್ ನಡುವಿನ ವಿಶೇಷ ಸ್ನೇಹಕ್ಕೆ ಹಾಗೂ ಭಾರತದ 1.4 ಬಿಲಿಯನ್ ಜನರಿಗೆ ಮತ್ತು ಮಾರಿಷಸ್‌ನಲ್ಲಿ ಇರುವ ಅವರ 1.3 ಮಿಲಿಯನ್ ಸಹೋದರ ಸಹೋದರಿಯರಿಗೆ ಅರ್ಪಿಸಿದರು.

4. ರಾಷ್ಟ್ರೀಯ ದಿನದ ಆಚರಣೆ ಸಂದರ್ಭದಲ್ಲಿ, ಭಾರತೀಯ ನೌಕಾಪಡೆಯ ಕವಾಯತು ತಂಡವು ಮೆರವಣಿಗೆಯಲ್ಲಿ ಭಾಗವಹಿಸಿತು. ರಾಷ್ಟ್ರೀಯ ದಿನದ ಆಚರಣೆಯ ವೇಳೆ ಭಾರತೀಯ ನೌಕಾಪಡೆಯ ಹಡಗು ಕೂಡಾ ಇಲ್ಲಿನ ಬಂದರಿನಲ್ಲಿ ಉಪಸ್ಥಿತಿ ದಾಖಲಿಸಿತು.

ಪೋರ್ಟ್ ಲೂಯಿಸ್

ಮಾರ್ಚ್ 12, 2025